


‘ಪರವಾಗಿಲ್ಲ... ನೀನು ಮಲಗಿರ್ತೀಯಾ, ಫೋನ್ ತೆಗೆಯಲ್ಲವೇನೋ ಅಂದುಕೊಂಡೆ. ಆದರೂ ಫೋನ್ ಮಾಡಿದ್ರೆ ಒಂಥರಾ ಸಮಾಧಾನ. ಬೆಳಗ್ಗೆ ಮಿಸ್ಡ್ ಕಾಲ್ ನೋಡಿದ ಕೂಡ್ಲೇ ಮಾಡ್ತೀಯಾ ಅನ್ನೋ ಭರವಸೆಯ ಎಳೆ ಜಗ್ಗುತ್ತೆ...’ ವಿನುತಾ ಊಂಗುಡುತ್ತಲೇ ಟೀ ಕುಡಿಯತೊಡಗಿದಳು.

ಏನು ಸಮಾಧಾನ ಹೇಳಬೇಕೆಂದು ಫಕ್ಕನೆ ಹೊಳೆಯಲಿಲ್ಲ. ‘ನಾನು ಏನು ತಪ್ಪು ಮಾಡಿದೆ ಅಂತ ನನಗೆ ಇಂಥ ಒಂಟಿತನ... ಯಾಕೆ ನನ್ನ ಬದುಕಿನಲ್ಲೇ ಹಿಂಗೆ ಆಗಬೇಕು... ಈ ಒಂಟಿತನ ಕಳ್ಕೊಳೋದಕ್ಕೆ ಏನು ಮಾಡಬೇಕು ಅಂತನೇ ತೋಚಲ್ಲ ಕಣೇ ವಿನೀ...’ ಮೇಗಲೆ ಹೇಳುತ್ತಲೇ ಕೊನೆಯಲ್ಲಿ ಬಿಕ್ಕಿದಳು. ವಿನುತಾಳಿಗೆ ಕೊಂಚ ಗಾಬರಿಯಾಯಿತು. ಎರಡು ತಿಂಗಳ ಹಿಂದೆ ರಾಜೋ ಮತ್ತು ತಾನು ಭೇಟಿಯಾದಾಗ ಲವಲವಿಕೆಯಿಂದಲೇ ಇದ್ದಳಲ್ಲ... ಮತ್ತೇನಾಯಿತು ಈಗ... ‘ಛೇ... ಯಾಕೆ ಆ ಥರಾ ಯೋಚನೆ ಮಾಡ್ತಾ ಅಳ್ತೀಯಾ... ನಿನ್ನ ತಪ್ಪು ಏನಿರುತ್ತೆ ಇದ್ರಲ್ಲಿ... ಯಾವುದೂ ನಮ್ಮ ಕೈಯಲ್ಲಿ ಇಲ್ಲ ಅಲ್ಲವಾ...’ ವಿನುತಾಳಿಗೆ ಬೆಳಗ್ಗೆ ಆಫೀಸಿಗೆ ಸಿದ್ಧವಾಗುವ ಮೊದಲು ಮಾಡಬೇಕಾದ ಅಡುಗೆಮನೆಯ ಕೆಲಸಗಳೇ